# ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:15-05-2015ರ ನಡವಳಿಗಳು

## ವಿಷಯದ ಸಂಖ್ಯೆ : 61 / 2015-16

ವಿಷಯ: 2015-16ನೇ ಸಾಲಿನ ಆಯವ್ಯಯ ಅಂದಾಜು ಪಟ್ಟಿಯನ್ನು ಪುನರ್ ಪರಿಶೀಲಿಸಿ ಅನುಮೋದನೆಗೆ ಸಲ್ಲಿಸಲಾದ ಟಿಪ್ಪಣಿ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015-16ನೇ ಸಾಲಿನ ಆಯವ್ಯಯದ ಆದಾಯ/ವೆಚ್ಚಗಳ ಅಂದಾಜುಗಳನ್ನು ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿಯು ವಿಷಯ ಸಂಖ್ಯೆ:130/2014-15 ದಿನಾಂಕ:12-3-2014 ರಂತೆ ಅನುಮೋದಿಸಿರುತ್ತದೆ. ದಿನಾಂಕ: 20-3-2015 ರಂದು ನಡೆದ ಕೌನ್ಸಿಲ್ ಸಭೆಯ ವಿಷಯದ ಸಂಖ್ಯೆ:459/2014-15 ರಲ್ಲಿ ಸಭೆಯು ಸದರಿ ಆಯವ್ಯಯವನ್ನು ಪರಿಷ್ಕರಿಸಿ ಅನುಮೋದಿಸಿದ್ದು, ಸರ್ಕಾರದ ಅನುಮೋದನೆಗಾಗಿ ಸಲ್ಲಿಸಬೇಕಾಗಿರುತ್ತದೆ.

ಮುಂದುವರೆದು, ದಿನಾಂಕ:19-4-2015 ರಂದು ಮಾನ್ಯ ಆಡಳಿತಗಾರರ ಅಧ್ಯಕ್ಷತೆಯಲ್ಲಿ ಪಾಲಿಕೆಯ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳಲ್ಲಿನ ಸಂಖ್ಯೆ:42 ರಲ್ಲಿ ಪಾಲಿಕೆಯ 2015-16ನೇ ಸಾಲಿನ ಆಯವ್ಯಯವು ವಾಸ್ತವಾಂಶದಿಂದ ಕೂಡಿರುವುದಿಲ್ಲ. ಸ್ವೀಕೃತಿ ಮತ್ತು ಪಾವತಿಗಳ ಆಧಾರದ ಮೇಲೆ ವಾಸ್ತವಾಂಶದಿಂದ ಕೂಡಿದ ನಿಜವಾದ ಆಯವ್ಯಯವನ್ನು ತಯಾರಿಸಬೇಕಾಗಿದ್ದು, ಈ ಸಂಬಂಧ ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ), ಮುಖ್ಯ ಲೆಕ್ಕಾಧಿಕಾರಿಗಳು, ಮುಖ್ಯ ಅಭಿಯಂತರರುಗಳು, ಉಪ ಆಯುಕ್ತರು (ಕಂದಾಯ) ಮತ್ತು ಅಪರ ಆಯುಕ್ತರು (ಆಡಳಿತ) ರವರನ್ನು ಒಳಗೊಂಡ ಸಮಿತಿಯನ್ನು ರಚನೆ ಮಾಡುವಂತೆ ಸೂಚಿಸಲಾಗಿದ್ದು, ಅದರಂತೆ, ಅಪರ ಆಯುಕ್ತರು (ಆಡಳಿತ) ರವರ ಕಛೇರಿ ಆದೇಶ ಸಂಖ್ಯೆ ಅಆ(ಆ)/ಪಿ.ಆರ್/535/15-16 ದಿನಾಂಕ:20-4-2015 ರಲ್ಲಿ ವಿಶೇಷ ಆಯುಕ್ತರು (ಘನತ್ಯಾಜ್ಯ ನಿರ್ವಹಣೆ), ರವರ ಅಧ್ಯಕ್ಷತೆಯಲ್ಲಿ, ಅಪರ ಆಯುಕ್ತರು (ಹಣಕಾಸು), ಮುಖ್ಯ ಲೆಕ್ಕಾಧಿಕಾರಿಗಳು, ಪ್ರಧಾನ ಅಭಿಯಂತರರು, ಉಪ ಆಯುಕ್ತರು (ಕಂದಾಯ) ಸದಸ್ಯರುಗಳ ಆಯವ್ಯಯ ಪರಿಶೀಲನಾ ಸಮಿತಿಯನ್ನು ರಚಿಸಿ ವರದಿಯನ್ನು ನೀಡುವಂತೆ ಸೂಚಿಸಲಾಗಿದೆ.

ಅದರಂತೆ, ಸಮಿತಿಯು ಆಯವ್ಯಯವನ್ನು ಪರಿಶೀಲಿಸುವ ಸಲುವಾಗಿ, ದಿನಾಂಕ: 04-05-2015, 05-05-2015 ಮತ್ತು 12-05-2015 ರಂದು ನಡೆದ ಸಭೆಗಳಲ್ಲಿ ಸಮಿತಿಯು ಚರ್ಚಿಸಿ ಹಾಗೂ ಮಾನ್ಯ ಆಡಳಿತಗಾರರು ಪರಿಶೀಲಿಸುವಂತೆ ಸೂಚಿಸಿರುವ ಹಿನ್ನೆಲೆಯಲ್ಲಿ ಪಾಲಿಕೆಯ ಆದಾಯ ಮತ್ತು ವೆಚ್ಚವನ್ನು ಈ ಕೆಳಕಂಡಂತೆ ಪರಿಷ್ಕರಿಸಲಾಗಿದೆ.

1. 2015-16ನೇ ಸಾಲಿನ ಆಯವ್ಯಯದಲ್ಲಿ ಪ್ರಾರಂಭಿಕ ಶುಲ್ಕವನ್ನು ಒಳಗೊಂಡಂತೆ ಒಟ್ಟು ರೂ.7181.62 ಕೋಟಿ ಆದಾಯವನ್ನು ನಿರೀಕ್ಷಿಸಲಾಗಿದ್ದು, ಸದರಿ ಆದಾಯವನ್ನು ರೂ.5411.25 ಕೋಟಿಗಳಿಗೆ ಸೀಮಿತಗೊಳಿಸಲಾಗಿದೆ. ಇದರಿಂದಾಗಿ ಒಟ್ಟು ರೂ.1770.37 ಕೋಟಿಗಳನ್ನು ಕಡಿತ ಗೊಳಿಸಬೇಕಾಗಿರುತ್ತದೆ.

..........................2

2. ಅದರಂತೆ, 2015-16ನೇ ಸಾಲಿಗೆ ಆಡಳಿತಾತ್ಮಕ ವೆಚ್ಚಗಳು, ಚಾಲ್ತಿ ಕಾಮಗಾರಿಗಳು, ಮುಂದುವರೆದು, ಕಾಮಗಾರಿಗಳು ಮತ್ತು ಬಾಕಿ ಬಿಲ್ಲುಗಳ ಪಾವತಿಗಾಗಿ ಒಟ್ಟು ರೂ.7180.48 ಕೋಟಿಗಳ ವೆಚ್ಚವನ್ನು ಅಂದಾಜಿಸಲಾಗಿದ್ದು, ಸದರಿ ವೆಚ್ಚವನ್ನು ರೂ.5409.68 ಕೋಟಿಗಳಿಗೆ ಸೀಮಿತಗೊಳಿಸಲಾಗಿದೆ. ಇದರಿಂದಾಗಿ ಒಟ್ಟು ರೂ.1770.80 ಕೋಟಿಗಳನ್ನು ಕಡಿತಗೊಳಿಸಬೇಕಾಗಿರುತ್ತದೆ.

3. ಒಟ್ಟು ರೂ.1770.37ಗಳ ಆದಾಯ/ಸ್ವೀಕೃತಿಯನ್ನು ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಕಡಿತಗೊಳಿಸಲಾಗಿದೆ.

4. ಒಟ್ಟು ರೂ.1770.80 ಕೋಟಿಗಳ ವೆಚ್ಚವನ್ನು ವಿವಿಧ ಲೆಕ್ಕ ಶೀರ್ಷಿಕೆಗಳಲ್ಲಿ ಕಡಿತಗೊಳಿಸಲಾಗಿದೆ.

ಮೇಲ್ಕಂಡಂತೆ ಪರಿಷ್ಕರಣೆಯ ಹಿನ್ನೆಲೆಯಲ್ಲಿ, 2015-16ನೇ ಸಾಲಿನ ಆಯವ್ಯಯದ ಸಂಕ್ಷಿಪ್ತ ಚಿತ್ರಣ ಈ ಕೆಳಕಂಡಂತಿರುತ್ತದೆ.

ರೂ.ಕೋಟಿಗಳಲ್ಲಿ

| | |
|---|---|
| ಪ್ರಾರಂಭಿಕ ಶಿಲ್ಕು | 17.17 |
| 2015-16ನೇ ಸಾಲಿಗೆ ನಿರೀಕ್ಷಿಸಲಾದ ಸ್ವೀಕೃತಿ | 5394.08 |
| ಒಟ್ಟು ಸ್ವೀಕೃತಿಗಳು | 5411.25 |
| ಅಂದಾಜಿಸಲಾದ ಒಟ್ಟು ಪಾವತಿಗಳು | 5409.68 |
| **ಅಂತಿಮ ಶಿಲ್ಕು** | **1.57** |

ಮೇಲ್ಕಂಡಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ 2015-16ನೇ ಸಾಲಿನ ಆಯವ್ಯಯವನ್ನು ಪರಿಶೀಲಿಸಿ ಪರಿಷ್ಕರಿಸಲಾಗಿದ್ದು, ಸದರಿ ಪ್ರಸ್ತಾವನೆಗೆ ಮಾನ್ಯ ಆಡಳಿತಗಾರರ ಅನುಮೋದನೆ ಕೋರಿ ಮಂಡಿಸಿರುವ ಆಯುಕ್ತರವರ ದಿನಾಂಕ:13-05-2015ರ ಟಿಪ್ಪಣಿ.

<u>ತೀರ್ಮಾನ:</u> **"ಅನುಮೋದಿಸಿದೆ"**.

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು